ಅ) ಇಲ್ಲಾ

ಆ) ಇಲ್ಲಾ

ಇ) ಪ್ರಾಪ್ತವಿರುವ ಮಾಹಿತಿ ಪ್ರಕಾರ ದೆಹಲಿ ಸಾರಿಗೆ ಸಂಸ್ಥೆಯಲ್ಲಿ ಪೆನ್‌ಷನ್ ಸ್ಕೀಂ ಅನ್ನು ಜಾರಿಗೆ ತರಲಾಗಿದೆ.

ಜನವರಿ 1989ರಿಂದ ಡಿಸೆಂಬರ್ 1992ರ ಅಂತ್ಯದವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆಯಾದ ನಿವೇಶನಗಳು

238 (725) ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜನವರಿ 1989ರಿಂದ ಡಿಸೆಂಬರ್ 1992ರ ಅಂತ್ಯದವರೆಗೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಿವೇಚನಾ ಪ್ರವರ್ಗದಲ್ಲಿ ಹಂಚಿಕೆ ಮಾಡಿದ ಒಟ್ಟು ನಿವೇಶನಗಳ ಸಂಖ್ಯೆ ಎಷ್ಟು;

ಆ) ಹೆಸರು, ವಿಳಾಸ ಮತ್ತು ನಿವೇಶನಗಳ ಅಳತೆ ಮತ್ತು ಪಾವತಿ ಮಾಡಿದ ನಿವೇಶನ ಮೌಲ್ಯದ ವಿವರಗಳನ್ನು ನೀಡುವುದು;

ಇ) ಈ ರೀತಿ ಹಂಚಿಕೆ ಮಾಡಿದ ನಿವೇಶನಗಳನ್ನು ರದ್ದುಪಡಿಸಿದ ಸಂಖ್ಯೆ ಎಷ್ಟು;

ಈ) ಬೆಂಗಳೂರು ನಗರದಲ್ಲಿ ನಿವೇಶನ ಮನೆಗಳನ್ನು ಹೊಂದಿರುವ ಬಗ್ಗೆ (ಕೆಲವು ಹಂಚಿಕೆದಾರರು) ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ ಇಂಥ ಹಂಚಿಕೆಗಳನ್ನು ರದ್ದುಪಡಿಸಲು ಉದ್ದೇಶಿಸಲ್ಪಟ್ಟ ಹೆಜ್ಜೆ ಯಾವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 1989ರಿಂದ ಯಾವುದೇ ಪ್ರಕಟಿತ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಹೊಸ ಬಸ್ಸುಗಳ ಖರೀದಿ

239 (724) ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):-

ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1992-93ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಎಷ್ಟು ಹೊಸ ಬಸ್ಸುಗಳನ್ನು ಖರೀದಿಸಲು ಉದ್ದೇಶಿಸಲಾಗಿದೆ;

ಆ) ಈ ಬಗ್ಗೆ ಟೆಂಡರ್‌ಗಳನ್ನು ಕರೆಯಲಾಗಿದೆಯೇ;

ಇ) ಈ ಬಸ್ಸುಗಳನ್ನು ಖರೀದಿಸಲು ತಗಲುವ ಅಂದಾಜು ವೆಚ್ಚವೆಷ್ಟು;

ಈ) ಖರೀದಿಸಿದ ಈ ಹೊಸ ಬಸ್ಸುಗಳಲ್ಲಿ ಎಷ್ಟನ್ನು ಬೀದರ್ ಜಿಲ್ಲೆಗೆ ಕೊಡಲಾಗುವುದು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) 1992–93ನೇ ಸಾಲಿನಲ್ಲಿ ಒಟ್ಟು 1350 ಹೊಸ ಬಸ್ಸಿನ ಅಡಿಗಟ್ಟುಗಳನ್ನು ಖರೀದಿಸಲು ಉದ್ದೇಶಿಸಲಾಗಿದೆ.

ಆ) ಇಲ್ಲ

ಇ) ರೂ. 76.81 ಕೋಟಿಗಳು

ಈ) 1992–93ನೇ ಸಾಲಿನ ಕಾರ್ಯ ಯೋಜನೆ ಪ್ರಕಾರ ಸುಮಾರು 43 ಹೊಸ ಬಸ್ಸುಗಳನ್ನು ಜನವರಿ 1993ರವರೆಗೆ ಕೊಡಬೇಕಾಗಿದ್ದು, 44 ವಾಹನಗಳನ್ನು ಕೊಡಲಾಗಿದೆ.

ಸಚಿವರುಗಳ ಸ್ವಾಧೀನದಲ್ಲಿರುವ ಎಲ್ಲಾ ಮಾದರಿಯ ರಾಜ್ಯ ವಾಹನಗಳ ವಿವರ

240 (723) ಶ್ರೀ ಬಸವರಾಜ ಪಾಟೀಲ್ ಆಟ್ಟೂರ್ (ಬಸವಕಲ್ಯಾಣ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ಕರ್ನಾಟಕ ಸರ್ಕಾರದ ಸಚಿವರುಗಳ ಉಪಯೋಗಕ್ಕಾಗಿಯೇ ರಾಜ್ಯ ಸರ್ಕಾರದ ಸ್ವಾಧೀನದಲ್ಲಿರುವ ಎಲ್ಲಾ ಮಾದರಿಯ ರಾಜ್ಯ ವಾಹನಗಳ ಸಂಖ್ಯೆ ಎಷ್ಟು;

2. ಇತ್ತೀಚೆಗೆ ಖರೀದಿಸಲಾದ ಹೊಸ ಕಾರುಗಳ ಸಂಖ್ಯೆ ಎಷ್ಟು;

3. ಹೊಸ ಕಾರುಗಳ ಖರೀದಿಗಾಗಿ ಮಾಡಿದ ವೆಚ್ಚವೆಷ್ಟು;

4. ಕೇಂದ್ರ ಸಚಿವರುಗಳು ಸೇರಿದಂತೆ ಇತರ ರಾಜ್ಯಗಳಲ್ಲಿ ಅಧಿಕೃತ ಉಪಯೋಗಕ್ಕಾಗಿ ಅಂಬಾಸಿಡರ್ ವಾಹನಗಳನ್ನು ಮಾತ್ರ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

5. ಹಾಗಿದ್ದಲ್ಲಿ, ಈಗಿರುವ ಕಾರುಗಳನ್ನು ಭಾರತ ಪ್ರವಾಸೋದ್ಯಮ ಅಭಿವೃದ್ಧಿ ಸಂಸ್ಥೆ ಅಥವಾ ಖಾಸಗಿ ಪ್ರವಾಸಿ ಸಂಸ್ಥೆಗಳಿಗೆ ನೀಡುವ ಮೂಲಕ ವಿಲೇವಾರಿ ಮಾಡಿ ಸರ್ಕಾರದ ವೆಚ್ಚವನ್ನು ಉಳಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ;

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

1. ಕಾಂಟೆಸ್ಸಾ ಕಾರುಗಳು	..	33 ***
ಮಾರುತಿ	..	1
ಅಂಬಾಸಿಡರ್	..	1
ಒಟ್ಟು	..	35

*** (ಹಂಚಿಕೆಯಾದ ವಾಹನಗಳು ರಿಪೇರಿಗೆ ಹೋದಾಗ ನೀಡುವ ಬದಲಿ ವಾಹನಗಳೂ ಸೇರಿದಂತೆ)

2. 12 (ಹನ್ನೆರಡು) ಕಾರುಗಳ ಖರೀದಿಗೆ ವ್ಯವಸ್ಥೆ ಮಾಡಲಾಗಿದೆ.